ಶ್ರೀ ಜಗದೀಶ್ ಶೆಟ್ಟರ್:- ನೀವು ಈ ರೀತಿ ಮೊಂಡುತನ ಮಾಡಿದರೆ ನಾವು ಧರಣಿ ಮಾಡಬೇಕಾಗುತ್ತದೆ.

Sri D.B. Chandre Gowda:- This is too much on the part of the opposition.

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳು ಭಾವಿಗೆ ಧರಣಿ ಮಾಡಲು ಬಂದರು)

(ಗೊಂದಲ)

ಅಧ್ಯಕ್ಷರು:- ಸದಸ್ಯರು ಒಟ್ಟಿಗೆ ನಾಲ್ಕೈದು ಜನರು ಮಾತನಾಡಿದರೆ ರೆಕಾರ್ಡ ಮಾಡಬೇಡಿ. ನಾನು ಈ ವಿಷಯದ ಬಗ್ಗೆ ಎರಡೂ ಕಡೆ ಸದಸ್ಯರುಗಳು ಮಾತನಾಡಿದ್ದು ಕೇಳಿದ್ದೇನೆ, ಇದಕ್ಕೆ ಅನೇಕ ರೂಲಿಂಗ್ಸ್ ಇದೆ, ನಾನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾ ಇಲ್ಲ, ತಾವೆಲ್ಲರೂ ನನ್ನ ಛೆಂಬರ್‌ಗೆ ಬನ್ನಿ, ಇದರ ಬಗ್ಗೆ ಇವತ್ತೇ ಡಿಸಿಷನ್ ತೆಗೆದುಕೊಳ್ಳೋಣ. We can sit after lunch.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಸುಮಾರು ಮೂರು ಗಂಟೆ ಕಾಲ ಇದೇ ವಿಷಯವಾಗಿ ಚರ್ಚೆಯಾಗಿದೆ, ಅವರು ಏನು ಹೇಳಬೇಕೋ ಅದನ್ನು ಹೇಳಲಿ, ಅದಕ್ಕೆ ನಮ್ಮದು ಏನೂ ತಕರಾರು ಇಲ್ಲ. ಇದನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ತಾವು ತೀರ್ಮಾನ ಮಾಡುತ್ತೀರಿ, ಮತ್ತೆ ಇದನ್ನು ನಮ್ಮ ಸರ್ಕಾರವನ್ನು ಕೇಳಿ ಮಾಡುತ್ತೀರಿ. ಇಲ್ಲಿ ಮುಖ್ಯವಾಗಿ ಅವರು ಏನು ಹೇಳುವುದು, ಈ ಭ್ರಷ್ಟಾಚಾರಕ್ಕೆ ಸರ್ಕಾರದ ರಕ್ಷಣೆ ಇದೆ ಎಂದು ಹೇಳಿದರು. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮೇಲ್ಮನೆಯಲ್ಲೂ ಕೂಡ, ನಿಯಮ 330ರ ಅಡಿಯಲ್ಲಿ ತೆಗೆದುಕೊಂಡತಹ ಸಂದರ್ಭದಲ್ಲಿ, ಗಮನ ಸೆಳೆಯುವ ಸೂಚನೆಯಡಿಯಲ್ಲಿ ತೆಗೆದುಕೊಂಡಂತಹ ಸಂದರ್ಭಗಳಲ್ಲಿ ವಿಷಯ ಮುಕ್ತವಾಗಿ ಚರ್ಚೆಯಾಗಲಿ, ಎಂದು ಮೂರು ಗಂಟೆಗಳ ಕಾಲಾವಕಾಶವನ್ನು ಕೊಟ್ಟು ಚರ್ಚೆ ಮಾಡಿದ್ದಾರೆ; ಇಲ್ಲೂ ಮೂರು ಗಂಟೆಗಳಲ್ಲ, ಮೂವತ್ತು ಗಂಟೆಗಳು ಬೇಕಾದರೂ ಚರ್ಚೆಯಾಗಲಿ., ಅದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ, ನಾವೇ ಈ ಲೋಕಾಯುಕ್ತಕ್ಕೆ ಶಕ್ತಿ ಕೊಡುತ್ತಿರುವಂಥಾದ್ದು, ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕೆಂದು ಹೊರಟಿರುವಂಥಾದ್ದು, ಎಂಬುದನ್ನು ತಾವು ಮರೆಯಬಾರದು. ಯಾವ ಸರ್ಕಾರಗಳೂ ಈ ಲೋಕಾಯುಕ್ತಕ್ಕೆ ಇಷ್ಟು ಶಕ್ತಿಯನ್ನು ಕೊಟ್ಟಿರಲಿಲ್ಲ, ಯಾರೂ ಈ ಲೋಕಾಯುಕ್ತದವರಿಗೆ ಕಾಳಜಿ ವಹಿಸಲು ಅಧಿಕಾರ ಕೊಟ್ಟಿರಲಿಲ್ಲ, ಇದನ್ನು ತಾವು ಮರೆಯಬಾರದು.

ಅಧ್ಯಕ್ಷರು:- ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡೋಣ, ಮಾನ್ಯ ಸಿಂಧ್ಯರವರು, ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನನ್ನ ಚೆಂಬರ್‌ಗೆ ಬನ್ನಿ.